
ಅದೊಂದು ಪ್ಲೇಗ್‌ನ ಮೆಟಾಫಿಜಿಕ್ಸ್ ಆಗಿದೆ ಎಂಬುದು ನನ್ನ ಅನಿಸಿಕೆ. 'ಒನ್ ಡೇ ಆಫ್ಟರ್ ಸೆಟರ್ಡೆ' – ಈ ಕಥೆಯಲ್ಲಿ ಹಕ್ಕಿಗಳನ್ನು ಕೊಲ್ಲಲು ಪ್ಲೇಗ್ ಬರುವ ಕಥಾನಕವನ್ನು ನಾನು ಬಳಸಿದ್ದೇನೆ. 'ಒನ್ ಹಂಡ್ರೆಡ್...'ನಲ್ಲಿ ಬರುವ ನಿದ್ರಾನಾಶದ ಪ್ಲೇಗು ಒಂದು ಸಾಹಿತ್ಯಿಕ ಫ್ಯಾಂಟಸಿಯಾಗಿದೆ. ನಿದ್ರಾನಾಶದ ಪ್ಲೇಗ್‌ನ ವಿರೋಧಿ ಕಥೆಯದು. ಸಾಹಿತ್ಯವು ಕೊನೆಗೂ ಒಂದು ಕುಸುರಿ ಕೆಲಸವಾಗಿದೆ. ಯಾವುದೇ ಕಲಾಕೃತಿಯನ್ನು ಸಿದ್ಧಪಡಿಸಲು ಶೇ. 10 ಪ್ರೇರಣೆ, ಶೇ. 90 ಬೆವರು ಬೇಕಾಗುತ್ತದೆ.




◆ ವಿದೇಶಿ ಸಾಲವನ್ನು ತೀರಿಸಲು ಒಂದು ದೇಶವು ತನ್ನ ಮಾಲೀಕತ್ವದ ಸಮುದ್ರವನ್ನು ಮಾರುತ್ತದೆ ಎಂದು 'ಆ ಆಟಮ್ ಆಫ್ ದ ಪೆಟ್ರಿಯಾರ್ಕ್' ಕಾದಂಬರಿಯಲ್ಲಿ ಬಂದಿದೆ. ಅದರ ಬಗೆಗೆ ಹೇಳಿ.

ಇದು ಸತ್ಯ ಘಟನೆ. ಮೇಲಿಂದ ಮೇಲೆ ನಡೆಯುತ್ತಲೇ ಇರುವಂಥದ್ದು. ಪೆಟ್ರಿಯಾರ್ಕ್ ಇದೊಂದು ಚಾರಿತ್ರಿಕ ಪುಸ್ತಕ. ಪತ್ರಿಕೋದ್ಯಮ ಹಾಗೂ ಕಾದಂಬರಿ ಬರವಣಿಗೆಯು ಜರುಗುವ ಸಾಧ್ಯತೆಯಿರುವ ಸಂಗತಿಗಳನ್ನು ಊಹೆ ಮಾಡುತ್ತದೆ. ನಾನು ಫ್ಯಾಂಟಸಿ ಬಗ್ಗೆ ಬರೆಯುವ ಲೇಖಕನೆಂದು ಜನ ಭಾವಿಸುತ್ತಾರೆ. ಇದೇ ನನ್ನ ಬರಹದ ಮುಖ್ಯ ಸಮಸ್ಯೆ. ಪ್ರಾಥಮಿಕವಾಗಿ ನಾನು ಸಂಪೂರ್ಣವಾಗಿ ವಾಸ್ತವವಾದಿ ಲೇಖಕ. ನಾನು ಸಮಾಜವಾದಿ ವಾಸ್ತವದ ಬಗೆಗೆ ಬರೆಯುತ್ತೇನೆ.

◆ 'ದ ಆಟಮ್ ಆಫ್ ದ ಪೆಟ್ರಿಯಾರ್ಕ್'ನಲ್ಲಿರುವ ಪಾತ್ರಗಳು ಯಾವುದನ್ನು ಆಧರಿಸಿವೆ?

ನನ್ನ ಪ್ರತಿಯೊಂದು ಕಾದಂಬರಿಯ ಪಾತ್ರಗಳು ಕೊಲಾಜ್‌ನಂತಿವೆ. ನಾನು ಸುಮಾರು ಹತ್ತು ವರ್ಷಗಳ ಕಾಲ 20 ಮತ್ತು 21ನೇ ಶತಮಾನದ ಸರ್ವಾಧಿಕಾರದ ಬಗೆಗೆ ಓದಿ ತಿಳಿದುಕೊಂಡಿದ್ದೇನೆ. ನಾನಿದನ್ನೆಲ್ಲ ಮರೆತು ನನ್ನದೇ ಪಾತ್ರ ಹುಡುಕುತ್ತ ಸಾಗಿದೆ. ಈ ಕಾದಂಬರಿ ನಡೆಯುವ ಜಾಗಕ್ಕಾಗಿ ಸ್ಪೇನ್ ಅನ್ನು ಆಯ್ಕೆ ಮಾಡಿಕೊಳ್ಳಲೇ ಎಂದು ಒಂದು ಕ್ಷಣ ಅನಿಸಿತು. ಕೊನೆಗೆ ಕೆರೆಬಿಯನ್ ಹಿನ್ನೆಲೆಯೆ ಕಾದಂಬರಿಗೆ ಯೋಗ್ಯ ಎಂದೆನಿಸಿತು. ನಾನು ಕೊಲಂಬಿಯಾದ ಮೂಲೆ ಮೂಲೆಗೂ ಭೇಟಿ ನೀಡಿದೆ. ನನ್ನ ಕಾದಂಬರಿಯಲ್ಲಿಯ ಹಲವು ಘಟಕಗಳು ಈ ಎಲ್ಲಾ ವಾಸ್ತವದಿಂದ ತೀರ ದೂರ ಇವೆ ಎಂದೆನಿಸಿತು.

◆ ನಿಮ್ಮ ಬರವಣಿಗೆಯಲ್ಲಿ ಪ್ರಭುತ್ವದ ಏಕಾಂತದ ಬಗೆಗಿನ ಕಥಾನಕ ಮೇಲಿಂದ ಮೇಲೆ ಬರುತ್ತದೆಯಲ್ಲ?